# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 28 ಚಾ ಸಾ 58

ಹೆಸರುಃ ಸುನಿಲ್ ಕುಮಾರ್ ಎಸ್ ಆರ್

ತಂದೆಯ ಹೆಸರುಃ ರಾಮಕೃಷ್ಣೇಗೌಡ

ವಯಸ್ಸುಃ 38 ವರ್ಷ

ಉದ್ಯೋಗಃ ಸಿಸಿ ಕ್ಯಾಮೆರಾ ಟೆಕ್ನಿಷಿಯನ್

ವಾಸಃ ಮೈಸೂರು .

**ದಿಃ 28.03.2025** ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ನಾನು ಕಳೆದ 12 ವರುಷದಿಂದ ಸಿಸಿ ಕ್ಯಾಮೆರಾ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಮೈಸೂರು, ಮಂಡ್ಯ , ಹಾಸನ , ಚಾಮರಾಜನಗರ ಮುಂತಾದ ಕಡೆಗಳಿಗೆ ಹೋಗಿ ಸಿಸಿ ಕ್ಯಾಮೆರಾದ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ .

2. ದಿಃ 11.2.22 ರಂದು ಕೆ ಆರ್ ಸಾಗರದ ವೃತ್ತ ನಿರೀಕ್ಷಕರಾದ ಪುನೀತ್ ರವರು ನನಗೆ ಪೋನ್ ಮಾಡಿ ಕೆ ಆರ್ ಸಾಗರದ ಠಾಣೆಗೆ ನನ್ನನ್ನು ಬರಮಾಡಿಕೊಂಡಿದ್ದರು . ನಾನು ಅಲ್ಲಿಗೆ ಹೋದ ನಂತರದಲ್ಲಿ ಒಂದು ಕೊಲೆ ಪ್ರಕರಣವಾಗಿದೆ . ಅದಕ್ಕೆ ಸಂಬಂಧಪಟ್ಟ ಆರೋಪಿ ಹೋದ ಕಡೆ ಎಲ್ಲಾ ಇರುವ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ತೆಗೆದುಕೊಡಬೇಕು ಎಂದು ನನ್ನನ್ನು ಕೋರಿಕೊಂಡಿದ್ದಾರೆ.

3. ಕೆ ಆರ್ ಎಸ್ ನಲ್ಲಿರುವ ರಾಜುರವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿದ್ದಾರೆ. ನನ್ನ ಜೊತೆಯಲ್ಲಿ ಕೊಲೆಯಾದ ಹೆಂಗಸಿನ ಗಂಡ ಮತ್ತು ಇಬ್ಬರು ಇಂಜಿನಿಯರ್ ಗಳು ಇದ್ದರು .

4. ಅದರಂತೆ ನಾವೆಲ್ಲರೂ ರಾಜು ರವರ ಮನೆಗೆ ಹೋಗಿದ್ದೇವೆ . ಆ ಮನೆಯ ಮೊದಲನೆ ಮಹಡಿಯಲ್ಲಿ ಸಿಸಿ ಕ್ಯಾಮೆರಾಕ್ಕೆ ಸಂಬಂಧಪಟ್ಟ ಡಿವಿಆರ್ ನ್ನು ಇಟ್ಟಿದ್ದಾರೆ . ಆ ಡಿ ವಿ ಆರ್ ನ್ನು ಪರಿಶೀಲಿಸಿದಾಗ ಕ್ಯಾಮೆರಾ ನಂ 2 ರಲ್ಲಿ 6 ನೇ

ತಾರೀಖಿನಂದು ಬೆಳಗಿನ ಜಾವ 5 ಗಂಟೆ 2 ನಿಮಿಷದ ಸಮಯದಲ್ಲಿ ಒಬ್ಬ ಹೆಂಗಸು ಆರೆಂಜ್ ಮತ್ತು ಕೆಂಪು ಬಣ್ಣದ ಸೀರೆ ಉಟ್ಟುಕೊಂಡು ಹೋಗುತ್ತಿದುದು ಕಂಡುಬಂತು. ಆಕೆಯನ್ನು ಮೃತೆಯ ಗಂಡ ಗುರುತಿಸಿದ್ದಾನೆ. ಆ ದೃಶ್ಯಾವಳಿಯನ್ನು ಸ್ಯಾಂಡ್-ಡಿಸ್ಕ ಎಂಬ 32-ಜಿ.ಬಿ. ಸಾಮರ್ಥ್ಯದ ಪೆನ್ ಡ್ರೈವ್ ಗೆ ಕಾಪಿ ಮಾಡಿಕೊಂಡಿದ್ದೇನೆ .

5. ಸದರಿ ಪೆನ್ ಡ್ರೈವ್ ಅನ್ನು ಈಗ ನೋಡಿದೆ. ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ .

6. ಸಾಕ್ಷಿಯು ನಿಪಿ 5 ರಲ್ಲಿರುವ ದೃಶ್ಯಾವಳಿಯನ್ನು ನೋಡಿಕೊಂಡು ಅದರಲ್ಲಿರುವ ಹೆಂಗಸು ಹೆಗಲ ಮೇಲೆ ಒಂದು ಚೀಲವನ್ನು ಹಿಡಿದುಕೊಂಡು ಹೋಗುತ್ತಿರುವುದು ಕಂಡುಬರುತ್ತದೆ .

7. ಆ ಸಂದರ್ಭದಲ್ಲಿ ಪೊಲೀಸರು ಒಂದು ಮಹಜರು ಮಾಡಿ ನನ್ನ ರುಜುವನ್ನು ಪಡೆದುಕೊಂಡಿದ್ದಾರೆ . ಸದರಿ ದಾಖಲೆಯನ್ನು ಈಗ ನೋಡಿದೆ . ಅದರಲ್ಲಿ ನನ್ನ ರುಜು ಇದೆ .

ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ 4 ಮತ್ತು ಸಾಕ್ಷಿಯ ರುಜುವನ್ನು 4 ಡಿ ಎಂದು ಗುರುತಿಸಲಾಯಿತು.

8. ಆ ಸಂದರ್ಭದಲ್ಲಿ ನಾಲ್ಕು ಫೋಟೋಗಳನ್ನು ನಿಪಿ 6 ರಂತೆ ತೆಗೆದಿರುತ್ತಾರೆ . ಆ ಫೋಟೋದಲ್ಲಿ ಪಿಂಕ್ ಬಣ್ಣದ ಟೀ ಶರ್ಟ್ ಧರಿಸಿರುವ ಪೊಲೀಸ್ ನಿರೀಕ್ಷಕರ ಬಲಭಾಗದಲ್ಲಿ ಕುಳಿತಿರುವ ವ್ಯಕ್ತಿ ನಾನು .

9. ಅದಾದ ನಂತರ ನನ್ನನ್ನು ಅದೇ ದಿನ ಕೆ ಆರ್ ಸಾಗರದ ಬೃಂದಾವನ ಗಾರ್ಡ್ ನಲ್ಲಿರುವ ಸೆಕ್ಯುರಿಟಿ ಮಾನಿಟರ್ ರೂಂ ಗೆ ಕರೆದುಕೊಂಡು ಹೋಗಿದ್ದಾರೆ . ಅಲ್ಲಿಯೂ ಕೂಡ ನಾನು ಸಿಸಿಕ್ಯಾಮೆರಾದ ಬ್ಯಾಕ್ ಅಪ್ ಅನ್ನು ದಿಃ 6.2.22 ರ ಬೆಳಗಿನ ಜಾವ 5.34 ಗಂಟೆಯಿಂದ ನಂತರದ 1 ನಿಮಿಷದ ದೃಶ್ಯಾವಳಿಯನ್ನು ಸ್ಯಾಂಡಿಕ್ ಕಂಪನಿಯ 32 ಜಿಬಿಯ ನ್ಯಾಯಾಲಯದ ಮುಂದಿರುವ ನಿಪಿ 27 ರ ಪೆನ್ ಡ್ರೈವ್ ಮೂಲಕ ಸಂಗ್ರಹಿಸಿಕೊಟ್ಟಿದ್ದೇನೆ .

10. ನಾನು ಸಂಗ್ರಹಿಸಿಕೊಟ್ಟ ದೃಶ್ಯಾವಳಿಯ ಪ್ರಕಾರ

ಅರಳಿಕಟ್ಟೆಯಲ್ಲಿ ಒಬ್ಬ ಹೆಂಗಸು ಕುಳಿತುಕೊಂಡಿರುವುದು ಮತ್ತು ಬಸ್ ಬಂದ ತಕ್ಷಣ ಅದಕ್ಕೆ ಹತ್ತಿ ಹೋಗುತ್ತಿರುವುದು ಕಂಡುಬಂತು .

11. ಆ ರೀತಿ ದೃಶ್ಯಾವಳಿಯನ್ನು ಸಂಗ್ರಹಿಸಿಕೊಟ್ಟಾಗ ಪೊಲೀಸರು ನನ್ನ ಸಮಕ್ಷಮದಲ್ಲಿ ನಿಪಿ.26 ರೀತಿಯ ಪಂಚನಾಮೆ ಮಾಡಿ ನನ್ನ ರುಜುವನ್ನು 26 ಬಿ ಪಡೆದುಕೊಂಡಿದ್ದಾರೆ .

12. ಆ ದಿವಸ ನಾನು ಸಂಗ್ರಹಿಸಿಕೊಟ್ಟ ದೃಶ್ಯಾವಳಿಯನ್ನು ಈಗ ನೋಡಿದೆ . ಅದರ ಪ್ರಕಾರ ಒಬ್ಬ ಹೆಂಗಸು ಇರುವುದು ಕಂಡುಬರುತ್ತದೆ . ಸಾಕ್ಷಿ ನಿಪಿ 27 ರಲ್ಲಿರುವ ಮೊದಲನೆ ದೃಶ್ಯಾವಳಿಯನ್ನು ನೋಡಿಕೊಂಡು ಉತ್ತರಿಸಿದ್ದಾರೆ .

13. ನಿಪಿ 27 ರ ಪೆನ್ ಡ್ರೈವ್ ನಲ್ಲಿ ಕ್ಯಾಮೆರಾ ಸಂಃ 6 ರಲ್ಲಿ ದಾಖಲುಗೊಂಡಿರುವ ದೃಶ್ಯಾವಳಿ ಇದೆ . ಆ ದೃಶ್ಯಾವಳಿಯನ್ನು ಈಗ ನೋಡಿದೆ . ಆ ದೃಶ್ಯಾವಳಿಯ ಪ್ರಕಾರ ನಾರ್ತ್ ಬ್ಯಾಂಕ್ ಕಡೆಯಿಂದ ಬಂದ ಬಸ್ ಗೆ ಒಬ್ಬ

ಹೆಂಗಸು ಓಡಿಕೊಂಡು ಹೋಗಿ ಹತ್ತುತ್ತಿರುವುದು ಕಂಡುಬರುತ್ತದೆ .

14. ಎರಡನೇ ದೃಶ್ಯಾವಳಿಯು ದಿಃ 6.2.22 ರ ಬೆಳಗಿನ ಜಾವ 5.36 ರಿಂದ 5.43 ಸಮಯದ ವರೆಗಿನದ್ದು.

15. ಆ ರೀತಿ ದೃಶ್ಯಾವಳಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ನಿಪಿ 28 ರಂತೆ 4 ಪೊಟೋಗಳನ್ನು ತೆಗೆಯಲಾಗಿದೆ .

16. ಮರುದಿನ ನನ್ನನ್ನು ಪೊಲೀಸರು ಬೆಲವತ್ತ ಗ್ರಾಮದ ವೆಂಕಟೇಶ್ ರವರ ಮನೆ ಮತ್ತು ಚಿಲ್ಲರೆ ಅಂಗಡಿಗೆ ಅಳವಡಿಸಲಾದ ಸಿಸಿಕ್ಯಾಮೆರಾದ ದೃಶ್ಯಾವಳಿಯನ್ನು ಸಂಗ್ರಹಿಸುವ ಸಂಬಂಧವಾಗಿ ಕರೆದುಕೊಂಡು ಹೋಗಿದ್ದಾರೆ .

17. ಅಲ್ಲಿಯ ಕ್ಯಾಮೆರಾ ಸಂಃ 1 ರ ದೃಶ್ಯಾವಳಿಯನ್ನು ಗಮನಿಸಿದಾಗ ದಿಃ 6.2.22 ರಂದು ಬೆಳಗ್ಗೆ 6.47 ನಿಮಿಷದಿಂದ 6.48 ಸಮಯದಲ್ಲಿ ಒಬ್ಬ ಮಹಿಳೆ ಬ್ಯಾಗನ್ನು ತೆಗೆದುಕೊಂಡು ವರುಣಾನಾಲೆಯ ಕಡೆಗೆ ಹೋಗುತ್ತಿರುವುದು ಮತ್ತು ಅದೇ ದಿನ 6.50 ನಿಮಿಷದಿಂದ 6.51 ನಿಮಿಷದ ಸಮಯದಲ್ಲಿ

ಬರಿಗೈನಲ್ಲಿ ವಾಪಸ್ ಬರುತ್ತಿರುವುದು ಕಂಡುಬರುತ್ತದೆ. ಆ ಸಂದರ್ಭದಲ್ಲೂ ಕೂಡ ಗಂಗಾರಾಮ್ ನಮ್ಮ ಜೊತೆಯಲ್ಲಿದ್ದರು. ಆತನು ಆ ಹೆಂಗಸು ಲಕ್ಷ್ಮಿ ಎಂದು ಗುರುತಿಸಿರುತ್ತಾನೆ.

18. ಸದರಿ ದೃಶ್ಯಾವಳಿಯನ್ನು ಸ್ಯಾನ್ ಡಿಸ್ಕ್ ಕಂಪನಿಯ 32 ಜಿಬಿ ಸಾಮರ್ಥ್ಯದ ನಿಪಿ 7 ರ ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿ ಪೊಲೀಸರಿಗೆ ಕೊಟ್ಟಾಗ ಅವರು ನಿಪಿ.8 ರಂತೆ ಪಂಚನಾಮೆ ಬರೆದು ನನ್ನ ರುಜುವನ್ನು 8 ಸಿ ರಂತೆ ಪಡೆದುಕೊಂಡು ಆ ಸಂದರ್ಭದಲ್ಲಿ ನಿಪಿ.9 ರೀತಿಯ 4 ಫೋಟೋಗಳನ್ನು ತೆಗೆದಿರುತ್ತಾರೆ .

ಪಾಟೀ ಸವಾಲು ಃ ಶ್ರೀ ಎಸ್ ಆರ್ ಎಸ್ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಿದೆ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)